ದಿನಾಂಕ: 07–01–2019,
ಸ್ಥಳ: ಕುಂದಾಪುರ

ರಿಗೆ,
ಪೋಲೀಸ್ ಉಪಾಧೀಕ್ಷಕರು
ಕುಂದಾಪುರ ಉಪವಿಭಾಗ
ಕುಂದಾಪುರ ತಾಲೂಕು
ಉಡುಪಿ ಜಿಲ್ಲೆ

ಮಾನ್ಯರೇ,

**ವಿಷಯ:– ಕುಂದಾಪುರ ತಾಲೂಕಿನಲ್ಲಿ ಬೆಳಕಿಗೆ ಬಂದಂತಹ ಗಂಡು ಮಕ್ಕಳ ಮೇಲೆ ಆದ ಶೋಷಣೆಯ ಪ್ರಕರಣದಲ್ಲಿ ಮಕ್ಕಳಿಗೆ ನ್ಯಾಯ ಒದಗಿಸುವ ಕುರಿತು ಹಾಗೂ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವ ಕುರಿತು ಹಕ್ಕೊತ್ತಾಯ**

ಕುಂದಾಪುರ ತಾಲೂಕಿನಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಂತಹ ಗಂಡು ಮಕ್ಕಳ ಮೇಲೆ ಆದ ಶೋಷಣೆಯು ಅತ್ಯಂತ ಖಂಡನೀಯ. ಕುಂದಾಪುರ ತಾಲೂಕಿನ ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳು ಹಾಗೂ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ, ಮಕ್ಕಳಿಂದಲೇ/ಮಹಿಳೆಯರಿಂದಲೇ ಆಯ್ಕೆಯಾದ ನಾವು ಮಕ್ಕಳ/ಮಹಿಳಾ ಮಿತ್ರರು ಇಂತಹ ಯಾವುದೇ ನಡೆಯನ್ನು ಖಡಾಖಂಡಿತವಾಗಿ ವಿರೋಧಿಸುತ್ತೇವೆ. ಅಲ್ಲದೇ ಈಗಾಗಲೇ ಅನ್ಯಾಯವಾಗಿರುವ ಮಕ್ಕಳ ಹಿತರಕ್ಷಣೆಗಾಗಿ, ಅವರಿಗೆ ನ್ಯಾಯ ಒದಗಿಸುವುದಕ್ಕಾಗಿ, ಮುಂದೇ ಯಾವುದೇ ಮಕ್ಕಳಿಗೆ ಇಂತಹ ಶೋಷಣೆ, ಅನ್ಯಾಯವಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮಕ್ಕಳ ಪರವಾಗಿ ನಾವು ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ. ಈ ಪ್ರಕರಣ ಯಾವುದೇ ಕಾರಣಕ್ಕೂ ನೆನೆಗುದಿಗೆ ಬೀಳದೇ ಮಕ್ಕಳಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ಹಕ್ಕೊತ್ತಾಯ.

- ಯಾವುದೇ ಒತ್ತಡಕ್ಕೆ ಮಣಿದು ಈ ಪ್ರಕರಣವು ದಿಕ್ಕು ತಪ್ಪದಂತೆ ನೋಡಿಕೊಳ್ಳುವಲ್ಲಿ ತಮ್ಮ ಬದ್ಧತೆಯನ್ನು ನಿರೀಕ್ಷಿಸುತ್ತೇವೆ
- ಯಾವುದೇ ಕಾರಣಕ್ಕೂ ಶೋಷಿತ ಮಕ್ಕಳಿಗೆ ಅನ್ಯಾಯವಾಗದಂತೆ ಈ ಪ್ರಕರಣದ ವಿಚಾರಣೆಯ ಎಲ್ಲಾ ಹಂತದಲ್ಲೂ ನಿಗಾ ವಹಿಸಬೇಕು. ಹಾಗೂ ಮಕ್ಕಳಿಗೆ, ಪೋಷಕರಿಗೆ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಬರುವಂತೆ ನಡೆದುಕೊಳ್ಳಬೇಕು.
- ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಜಾಮೀನು ಸಿಕ್ಕಿ, ಆ ವ್ಯಕ್ತಿ ಹೊರಬಂದರೆ ಶೋಷಿತ ಮಕ್ಕಳಿಗೆ ಮಾನಸಿಕ ಹಿಂಸೆಯಾಗುವ, ಇನ್ನೂ ಶೋಷಣೆಯಾಗುವ ಸಾಧ್ಯತೆ ಇದೆ. ಅಲ್ಲದೇ, ಇನ್ನೂ ಹೆಚ್ಚು ಮಕ್ಕಳ ಮೇಲೆ ಶೋಷಣೆಯಾಗಿದೆ ಎಂಬ ಗುಮಾನಿ ಇದ್ದು, ಅಂತಹ ವಿಷಯಗಳನ್ನು ಹೇಳಿಕೊಳ್ಳುವಲ್ಲಿ ಮಕ್ಕಳು ಹಿಂದೇಟು ಹಾಕುವ ಸಾಧ್ಯತೆ ಇದೆ. ಅಲ್ಲದೇ ಉಳಿದ ಮಕ್ಕಳಿಗೂ ಇಂತಹ ವಿಷಯಗಳನ್ನು ಹೇಳಿಕೊಂಡರೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂಬ ಅಪನಂಬಿಕೆ ಬೆಳೆಯುವ ಸಾಧ್ಯತೆಯೂ ಇದೆ. ಆದ್ದರಿಂದ ಯಾವುದೇ ಕಾರಣಕ್ಕೂ ತಪ್ಪಿತಸ್ಥರಿಗೆ ಜಾಮೀನು ಸಿಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.
- ಇತರರು ಇಂತಹ ಯಾವುದೇ ಖಂಡನೀಯ ಹೀನ ಕೃತ್ಯ ಕೈಗೊಳ್ಳದಂತೆ ಮಾದರಿಯಾಗುವ ರೀತಿಯಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು.
- ಆರೋಪಿಯಿಂದ ಪ್ರಕರಣ ದಾಖಲಿಸಿದ ಶೋಷಿತ ಮಕ್ಕಳಿಗೆ, ಗುಮಾನಿ ಇರುವ ಶೋಷಿತ ಮಕ್ಕಳಿಗೆ, ಅವರ ಪೋಷಕರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ಅವರಿಗೆ ಅಗತ್ಯ ರಕ್ಷಣೆ, ಮಾನಸಿಕ ಸ್ಥೈರ್ಯ ಮೂಡಿಸುವಂತಹ ಅಗತ್ಯ ಕ್ರಮ ಕೈಗೊಳ್ಳಬೇಕು.
- ನಮ್ಮ ತಾಲೂಕಿನಲ್ಲಿ ಆಗಿರುವ ಈ ಪ್ರಕರಣ ಇಡೀ ದೇಶವನ್ನೇ ಬೆಚ್ಚಿಬೀಳಿಸುವಂತಹ ಪ್ರಕರಣವಾಗಿದ್ದು, ಇದಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆ, ವ್ಯವಸ್ಥೆ, ರಚನೆಗಳು ನ್ಯಾಯದ ಪರ ಇರಬೇಕು.
- ಇಂತಹ ಪ್ರಕರಣದ ಬಗ್ಗೆ ಜಿಲ್ಲೆಯ ಎಲ್ಲಾ ಮಕ್ಕಳಿಗೂ ಅರಿವು ಮೂಡಿಸುವ, ಅಂತಹ ಸಮಯ ಎದುರಾದಾಗ ಮಕ್ಕಳು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತಹ ಕಾರ್ಯಗಳು ನಡೆಯಬೇಕು.

ಈ ಎಲ್ಲಾ ವಿಷಯಗಳನ್ನು ತಾವು ಹಾಗೂ ತಮ್ಮ ಇಲಾಖೆ ಅತ್ಯಂತ ಜವಾಬ್ದಾರಿಯುತವಾಗಿ ನಿಭಾಯಿಸುತ್ತೀರಿ ಎಂಬ ನಂಬಿಕೆಯಿಂದ ಈ ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ.

ಮಕ್ಕಳ ಹಕ್ಕುಗಳ ರಕ್ಷಣೆಯ ಸೌಕರ್ಯಕಾರರಾಗಿ ಇರುವ ಕುಂದಾಪುರ ತಾಲೂಕಿನ ಮಕ್ಕಳ/ಮಹಿಳಾ ಮಿತ್ರರ ಪರವಾಗಿ

| ಕ್ರ.ಸಂ. | ಮಕ್ಕಳ/ಮಹಿಳಾ ಮಿತ್ರರ ಹೆಸರು | ಪಂಚಾಯತ್ | ಸಹಿ |
|---|---|---|---|

ದಿನಾಂಕ: 07–01–2019,
ಸ್ಥಳ: ಕುಂದಾಪುರ

ರಿಗೆ,
ಸಹಾಯಕ ಆಯುಕ್ತರು
ಕುಂದಾಪುರ ಉಪವಿಭಾಗ
ಕುಂದಾಪುರ ತಾಲೂಕು
ಉಡುಪಿ ಜಿಲ್ಲೆ

ಮಾನ್ಯರೇ,

**ವಿಷಯ:– ಕುಂದಾಪುರ ತಾಲೂಕಿನಲ್ಲಿ ಬೆಳಕಿಗೆ ಬಂದಂತಹ ಗಂಡು ಮಕ್ಕಳ ಮೇಲೆ ಆದ ಶೋಷಣೆಯ ಪ್ರಕರಣದಲ್ಲಿ ಮಕ್ಕಳಿಗೆ ನ್ಯಾಯ ಒದಗಿಸುವ ಕುರಿತು ಹಾಗೂ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವ ಕುರಿತು ಹಕ್ಕೊತ್ತಾಯ**

ಕುಂದಾಪುರ ತಾಲೂಕಿನಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಂತಹ ಗಂಡು ಮಕ್ಕಳ ಮೇಲೆ ಆದ ಶೋಷಣೆಯು ಅತ್ಯಂತ ಖಂಡನೀಯ. ಕುಂದಾಪುರ ತಾಲೂಕಿನ ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳು ಹಾಗೂ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ, ಮಕ್ಕಳಿಂದಲೇ/ಮಹಿಳೆಯರಿಂದಲೇ ಆಯ್ಕೆಯಾದ ನಾವು ಮಕ್ಕಳ/ಮಹಿಳಾ ಮಿತ್ರರು ಇಂತಹ ಯಾವುದೇ ನಡೆಯನ್ನು ಖಡಾಖಂಡಿತವಾಗಿ ವಿರೋಧಿಸುತ್ತೇವೆ. ಅಲ್ಲದೇ ಈಗಾಗಲೇ ಅನ್ಯಾಯವಾಗಿರುವ ಮಕ್ಕಳ ಹಿತರಕ್ಷಣೆಗಾಗಿ, ಅವರಿಗೆ ನ್ಯಾಯ ಒದಗಿಸುವುದಕ್ಕಾಗಿ, ಮುಂದೇ ಯಾವುದೇ ಮಕ್ಕಳಿಗೆ ಇಂತಹ ಶೋಷಣೆ, ಅನ್ಯಾಯವಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮಕ್ಕಳ ಪರವಾಗಿ ನಾವು ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ. ಈ ಪ್ರಕರಣ ಯಾವುದೇ ಕಾರಣಕ್ಕೂ ನೆನೆಗುದಿಗೆ ಬೀಳದೇ ಮಕ್ಕಳಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ಹಕ್ಕೊತ್ತಾಯ.

- ಯಾವುದೇ ಒತ್ತಡಕ್ಕೆ ಮಣಿದು ಈ ಪ್ರಕರಣವು ದಿಕ್ಕು ತಪ್ಪದಂತೆ ನೋಡಿಕೊಳ್ಳುವಲ್ಲಿ ತಮ್ಮ ಬದ್ಧತೆಯನ್ನು ನಿರೀಕ್ಷಿಸುತ್ತೇವೆ
- ಯಾವುದೇ ಕಾರಣಕ್ಕೂ ಶೋಷಿತ ಮಕ್ಕಳಿಗೆ ಅನ್ಯಾಯವಾಗದಂತೆ ಈ ಪ್ರಕರಣದ ವಿಚಾರಣೆಯ ಎಲ್ಲಾ ಹಂತದಲ್ಲೂ ನಿಗಾ ವಹಿಸಬೇಕು. ಹಾಗೂ ಮಕ್ಕಳಿಗೆ, ಪೋಷಕರಿಗೆ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಬರುವಂತೆ ನಡೆದುಕೊಳ್ಳಬೇಕು.
- ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಜಾಮೀನು ಸಿಕ್ಕಿ, ಆ ವ್ಯಕ್ತಿ ಹೊರಬಂದರೆ ಶೋಷಿತ ಮಕ್ಕಳಿಗೆ ಮಾನಸಿಕ ಹಿಂಸೆಯಾಗುವ, ಇನ್ನೂ ಶೋಷಣೆಯಾಗುವ ಸಾಧ್ಯತೆ ಇದೆ. ಅಲ್ಲದೇ, ಇನ್ನೂ ಹೆಚ್ಚು ಮಕ್ಕಳ ಮೇಲೆ ಶೋಷಣೆಯಾಗಿದೆ ಎಂಬ ಗುಮಾನಿ ಇದ್ದು, ಅಂತಹ ವಿಷಯಗಳನ್ನು ಹೇಳಿಕೊಳ್ಳುವಲ್ಲಿ ಮಕ್ಕಳು ಹಿಂದೇಟು ಹಾಕುವ ಸಾಧ್ಯತೆ ಇದೆ. ಅಲ್ಲದೇ ಉಳಿದ ಮಕ್ಕಳಿಗೂ ಇಂತಹ ವಿಷಯಗಳನ್ನು ಹೇಳಿಕೊಂಡರೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂಬ ಅಪನಂಬಿಕೆ ಬೆಳೆಯುವ ಸಾಧ್ಯತೆಯೂ ಇದೆ. ಆದ್ದರಿಂದ ಯಾವುದೇ ಕಾರಣಕ್ಕೂ ತಪ್ಪಿತಸ್ಥರಿಗೆ ಜಾಮೀನು ಸಿಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.
- ಇತರರು ಇಂತಹ ಯಾವುದೇ ಖಂಡನೀಯ ಹೀನ ಕೃತ್ಯ ಕೈಗೊಳ್ಳದಂತೆ ಮಾದರಿಯಾಗುವ ರೀತಿಯಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು.
- ಆರೋಪಿಯಿಂದ ಪ್ರಕರಣ ದಾಖಲಿಸಿದ ಶೋಷಿತ ಮಕ್ಕಳಿಗೆ, ಗುಮಾನಿ ಇರುವ ಶೋಷಿತ ಮಕ್ಕಳಿಗೆ, ಅವರ ಪೋಷಕರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ಅವರಿಗೆ ಅಗತ್ಯ ರಕ್ಷಣೆ, ಮಾನಸಿಕ ಸ್ಥೈರ್ಯ ಮೂಡಿಸುವಂತಹ ಅಗತ್ಯ ಕ್ರಮ ಕೈಗೊಳ್ಳಬೇಕು.
- ನಮ್ಮ ತಾಲೂಕಿನಲ್ಲಿ ಆಗಿರುವ ಈ ಪ್ರಕರಣ ಇಡೀ ದೇಶವನ್ನೇ ಬೆಚ್ಚಿಬೀಳಿಸುವಂತಹ ಪ್ರಕರಣವಾಗಿದ್ದು, ಇದಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆ, ವ್ಯವಸ್ಥೆ, ರಚನೆಗಳು ನ್ಯಾಯದ ಪರ ಇರಬೇಕು.
- ಇಂತಹ ಪ್ರಕರಣದ ಬಗ್ಗೆ ಜಿಲ್ಲೆಯ ಎಲ್ಲಾ ಮಕ್ಕಳಿಗೂ ಅರಿವು ಮೂಡಿಸುವ, ಅಂತಹ ಸಮಯ ಎದುರಾದಾಗ ಮಕ್ಕಳು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತಹ ಕಾರ್ಯಗಳು ನಡೆಯಬೇಕು.

ಈ ಎಲ್ಲಾ ವಿಷಯಗಳನ್ನು ತಾವು ಹಾಗೂ ತಮ್ಮ ಇಲಾಖೆ ಅತ್ಯಂತ ಜವಾಬ್ದಾರಿಯುತವಾಗಿ ನಿಭಾಯಿಸುತ್ತೀರಿ ಎಂಬ ನಂಬಿಕೆಯಿಂದ ಈ ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ.

ಮಕ್ಕಳ ಹಕ್ಕುಗಳ ರಕ್ಷಣೆಯ ಸೌಕರ್ಯಕಾರರಾಗಿ ಇರುವ ಕುಂದಾಪುರ ತಾಲೂಕಿನ ಮಕ್ಕಳ/ಮಹಿಳಾ ಮಿತ್ರರ ಪರವಾಗಿ

| ಕ್ರ.ಸಂ. | ಮಕ್ಕಳ/ಮಹಿಳಾ ಮಿತ್ರರ ಹೆಸರು | ಪಂಚಾಯತ್ | ಸಹಿ |
|---|---|---|---|

ದಿನಾಂಕ: 07–01–2019,
ಸ್ಥಳ: ಕುಂದಾಪುರ

ರಿಗೆ,
ಅಧ್ಯಕ್ಷರು ಹಾಗೂ ಸರ್ವ ಸದಸ್ಯರು
ವಕೀಲರ ಸಂಘ
ಕುಂದಾಪುರ ತಾಲೂಕು

ಮಾನ್ಯರೇ,

**ವಿಷಯ:– ಕುಂದಾಪುರ ತಾಲೂಕಿನಲ್ಲಿ ಬೆಳಕಿಗೆ ಬಂದಂತಹ ಗಂಡು ಮಕ್ಕಳ ಮೇಲೆ ಆದ ಶೋಷಣೆಯ ಪ್ರಕರಣದಲ್ಲಿ ಮಕ್ಕಳಿಗೆ ನ್ಯಾಯ ಒದಗಿಸುವ ಕುರಿತು ಹಾಗೂ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವ ಕುರಿತು ಹಕ್ಕೊತ್ತಾಯ**

ಕುಂದಾಪುರ ತಾಲೂಕಿನಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಂತಹ ಗಂಡು ಮಕ್ಕಳ ಮೇಲೆ ಆದ ಶೋಷಣೆಯು ಅತ್ಯಂತ ಖಂಡನೀಯ. ಕುಂದಾಪುರ ತಾಲೂಕಿನ ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳು ಹಾಗೂ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ, ಮಕ್ಕಳಿಂದಲೇ/ಮಹಿಳೆಯರಿಂದಲೇ ಆಯ್ಕೆಯಾದ ನಾವು ಮಕ್ಕಳ/ಮಹಿಳಾ ಮಿತ್ರರು ಇಂತಹ ಯಾವುದೇ ನಡೆಯನ್ನು ಖಡಾಖಂಡಿತವಾಗಿ ವಿರೋಧಿಸುತ್ತೇವೆ. ಅಲ್ಲದೇ ಈಗಾಗಲೇ ಅನ್ಯಾಯವಾಗಿರುವ ಮಕ್ಕಳ ಹಿತರಕ್ಷಣೆಗಾಗಿ, ಅವರಿಗೆ ನ್ಯಾಯ ಒದಗಿಸುವುದಕ್ಕಾಗಿ, ಮುಂದೇ ಯಾವುದೇ ಮಕ್ಕಳಿಗೆ ಇಂತಹ ಶೋಷಣೆ, ಅನ್ಯಾಯವಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮಕ್ಕಳ ಪರವಾಗಿ ನಾವು ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ. ಈ ಪ್ರಕರಣ ಯಾವುದೇ ಕಾರಣಕ್ಕೂ ನೆನೆಗುದಿಗೆ ಬೀಳದೇ ಮಕ್ಕಳಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ಹಕ್ಕೊತ್ತಾಯ.

- ಯಾವುದೇ ಒತ್ತಡಕ್ಕೆ ಮಣಿದು ಈ ಪ್ರಕರಣವು ದಿಕ್ಕು ತಪ್ಪದಂತೆ ನೋಡಿಕೊಳ್ಳುವಲ್ಲಿ ತಮ್ಮ ಬದ್ಧತೆಯನ್ನು ನಿರೀಕ್ಷಿಸುತ್ತೇವೆ
- ಯಾವುದೇ ಕಾರಣಕ್ಕೂ ಶೋಷಿತ ಮಕ್ಕಳಿಗೆ ಅನ್ಯಾಯವಾಗದಂತೆ ಈ ಪ್ರಕರಣದ ವಿಚಾರಣೆಯ ಎಲ್ಲಾ ಹಂತದಲ್ಲೂ ನಿಗಾ ವಹಿಸಬೇಕು. ಹಾಗೂ ಮಕ್ಕಳಿಗೆ, ಪೋಷಕರಿಗೆ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಬರುವಂತೆ ನಡೆದುಕೊಳ್ಳಬೇಕು.
- ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಜಾಮೀನು ಸಿಕ್ಕಿ, ಆ ವ್ಯಕ್ತಿ ಹೊರಬಂದರೆ ಶೋಷಿತ ಮಕ್ಕಳಿಗೆ ಮಾನಸಿಕ ಹಿಂಸೆಯಾಗುವ, ಇನ್ನೂ ಶೋಷಣೆಯಾಗುವ ಸಾಧ್ಯತೆ ಇದೆ. ಅಲ್ಲದೇ, ಇನ್ನೂ ಹೆಚ್ಚು ಮಕ್ಕಳ ಮೇಲೆ ಶೋಷಣೆಯಾಗಿದೆ ಎಂಬ ಗುಮಾನಿ ಇದ್ದು, ಅಂತಹ ವಿಷಯಗಳನ್ನು ಹೇಳಿಕೊಳ್ಳುವಲ್ಲಿ ಮಕ್ಕಳು ಹಿಂದೇಟು ಹಾಕುವ ಸಾಧ್ಯತೆ ಇದೆ. ಅಲ್ಲದೇ ಉಳಿದ ಮಕ್ಕಳಿಗೂ ಇಂತಹ ವಿಷಯಗಳನ್ನು ಹೇಳಿಕೊಂಡರೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂಬ ಅಪನಂಬಿಕೆ ಬೆಳೆಯುವ ಸಾಧ್ಯತೆಯೂ ಇದೆ. ಆದ್ದರಿಂದ ಯಾವುದೇ ಕಾರಣಕ್ಕೂ ತಪ್ಪಿತಸ್ಥರಿಗೆ ಜಾಮೀನು ಸಿಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು.
- ಇತರರು ಇಂತಹ ಯಾವುದೇ ಖಂಡನೀಯ ಹೀನ ಕೃತ್ಯ ಕೈಗೊಳ್ಳದಂತೆ ಮಾದರಿಯಾಗುವ ರೀತಿಯಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು.
- ಆರೋಪಿಯಿಂದ ಪ್ರಕರಣ ದಾಖಲಿಸಿದ ಶೋಷಿತ ಮಕ್ಕಳಿಗೆ, ಗುಮಾನಿ ಇರುವ ಶೋಷಿತ ಮಕ್ಕಳಿಗೆ, ಅವರ ಪೋಷಕರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ಅವರಿಗೆ ಅಗತ್ಯ ರಕ್ಷಣೆ, ಮಾನಸಿಕ ಸ್ಥೈರ್ಯ ಮೂಡಿಸುವಂತಹ ಅಗತ್ಯ ಕ್ರಮ ಕೈಗೊಳ್ಳಬೇಕು.
- ನಮ್ಮ ತಾಲೂಕಿನಲ್ಲಿ ಆಗಿರುವ ಈ ಪ್ರಕರಣ ಇಡೀ ದೇಶವನ್ನೇ ಬೆಚ್ಚಿಬೀಳಿಸುವಂತಹ ಪ್ರಕರಣವಾಗಿದ್ದು, ಇದಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆ, ವ್ಯವಸ್ಥೆ, ರಚನೆಗಳು ನ್ಯಾಯದ ಪರ ಇರಬೇಕು.
- ಇಂತಹ ಪ್ರಕರಣದ ಬಗ್ಗೆ ಜಿಲ್ಲೆಯ ಎಲ್ಲಾ ಮಕ್ಕಳಿಗೂ ಅರಿವು ಮೂಡಿಸುವ, ಅಂತಹ ಸಮಯ ಎದುರಾದಾಗ ಮಕ್ಕಳು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತಹ ಕಾರ್ಯಗಳು ನಡೆಯಬೇಕು.

ಈ ಎಲ್ಲಾ ವಿಷಯಗಳನ್ನು ತಾವು ಹಾಗೂ ತಮ್ಮ ಇಲಾಖೆ ಅತ್ಯಂತ ಜವಾಬ್ದಾರಿಯುತವಾಗಿ ನಿಭಾಯಿಸುತ್ತೀರಿ ಎಂಬ ನಂಬಿಕೆಯಿಂದ ಈ ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ.

ಮಕ್ಕಳ ಹಕ್ಕುಗಳ ರಕ್ಷಣೆಯ ಸೌಕರ್ಯಕಾರರಾಗಿ ಇರುವ ಕುಂದಾಪುರ ತಾಲೂಕಿನ ಮಕ್ಕಳ/ಮಹಿಳಾ ಮಿತ್ರರ ಪರವಾಗಿ

| ಕ್ರ.ಸಂ. | ಮಕ್ಕಳ/ಮಹಿಳಾ ಮಿತ್ರರ ಹೆಸರು | ಪಂಚಾಯತ್ | ಸಹಿ |
|---|---|---|---|